# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸದಸ್ಯರು, ಸುಳಗಾ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: Compt/UPLOK/BGM-2812/2012/ARE-5, ದಿನಾಂಕ 20.10.2016
2) ಇದೇ ಸಮಸಂಖ್ಯೆಯ ಕಾರಣ ಕೇಳಿ ನೋಟೀಸ್, ದಿನಾಂಕ 06.01.2017
3) ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸದಸ್ಯರು, ಸುಳಗಾ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಉತ್ತರ, ದಿನಾಂಕ 03.03.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ಮಾನ್ಯ ಉಪಲೋಕಾಯುಕ್ತ ವರದಿಯಲ್ಲಿನ ಶಿಫಾರಸ್ಸಿನಲ್ಲಿ, ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸುಳಗಾ ಗ್ರಾಮ ಪಂಚಾಯತಿ ಸರ್ಕಾರಿ ಶಾಲೆಯ ಅಕ್ಷರ ದಾಸೋಹ ಗೋಡೌನ್ ಕಾಮಗಾರಿಯನ್ನು ಟೆಂಡರ್ ಮೂಲಕ ನಿರ್ವಹಿಸದೆ, ಸ್ವತಃ ನಿರ್ವಹಿಸಿ ರೂ.25,000/- ಗಳ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪದ ಹಿನ್ನೆಲೆಯಲ್ಲಿ ಸದರಿಯವರು ಪ್ರಸ್ತುತ ಗ್ರಾಮ ಪಂಚಾಯತಿಯಲ್ಲಿ ಹೊಂದಿರುವ ಹುದ್ದೆಯಿಂದ ತೆಗೆದುಹಾಕಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಗ್ರಾಮ ಪಂಚಾಯತಿ ಸದಸ್ಯತ್ವದಿಂದ ತೆಗೆದು ಹಾಕಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ ರಡಿ ಸದರಿಯವರಿಗೆ ಸರ್ಕಾರದಿಂದ ಕಾರಣ ಕೇಳಿ ನೋಟೀಸ್ ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ ರನ್ವಯ ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಇವರಿಗೆ ಸರ್ಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಕೆಳಕಂಡಂತೆ ಉತ್ತರಗಳನ್ನು ಸಲ್ಲಿಸಿರುತ್ತಾರೆ.

1) ಸುಳಗಾ ಶಾಲೆಯ ಎಸ್.ಡಿ.ಎಂ.ಸಿ. ಸದಸ್ಯನಾಗಿ ಶಾಲೆ ಸುಧಾರಣೆಗಾಗಿ ಕೆಲಸ ಮಾಡಿದ್ದು, ಯಾವುದೇ ವೇಳೆಯಲ್ಲಿ ಯಾವುದೇ ಹಣ ದುರುಪಯೋಗಪಡಿಸಿಕೊಂಡಿರುವುದಿಲ್ಲವೆಂದು ಹಾಗೂ ತನ್ನ ಮೇಲೆ ಯಾವುದೇ ಆಪಾದನೆಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ.
2) ದಿನಾಂಕ 17.07.2010 ರಂದು ಸದರಿ ಶಾಲೆಯ ಎಸ್.ಡಿ.ಎಂ.ಸಿ. ಕಮಿಟಿ ಸಭೆ ಅಧ್ಯಕ್ಷರು ಹಾಗೂ ಮುಖ್ಯೋಪಾಧ್ಯಾಯರ ಸಮ್ಮುಖದಲ್ಲಿ ನಡೆದಿದ್ದು, ಶಾಲೆಯ ಅಕ್ಷರ ದಾಸೋಹ ಗೋಡೌನ್ ನಿರ್ಮಾಣ ಮಾಡಲು ಠರಾವು ಪಾಸು ಮಾಡಲಾಗಿದ್ದು, ಶಾಲಾ ಮುಖ್ಯೋಪಾಧ್ಯಾಯರು ಠರಾವು ಬರೆದಿರುತ್ತಾರೆ. ಬರೆಯುವ ವೇಳೆ ತಪ್ಪಾಗಿದ್ದರಿಂದ ಅವರೇ ಸೂಪರ್ ವಿಸನ್ ಎಂದು ಸರಿಪಡಿಸಿ ಬರೆದಿರುತ್ತಾರೆ. ನಂತರ ಹಾಜರಿದ್ದ ಎಲ್ಲಾ ಸದಸ್ಯರು ಸಹಿ ಮಾಡಿದ್ದು, ನಂತರ ಕಟ್ಟಡಸ ದೇಖರೇಕಿಯನ್ನು ತನಗೆ ಒಪ್ಪಿಸಿ 60 ದಿನಗಳಲ್ಲಿ ಪೂರ್ಣಗೊಳಿಸಲು ತೀರ್ಮಾನಿಸಲಾಯಿತು. ಈ ತಿದ್ದುಪಡಿಯನ್ನು ದೂರು ನೀಡಿದ ನಂತರ ಮಾಡಿರುವುದೆಂದು ತಿಳಿಸಿರುವುದು ಸತ್ಯಕ್ಕೆ ದೂರವಾಗಿದೆ ಎಂದು ತಿಳಿಸಿರುತ್ತಾರೆ.

3) ಶಾಲೆಯ ಹಿತದೃಷ್ಟಿಯಿಂದ ಕಟ್ಟಡದ ದೇಖರೇಕಿಯನ್ನು ಮಾಡಿದ್ದು, ಯಾವುದೇ ಚಾಪಾಕಾಗದ ಬರೆದುಕೊಟ್ಟಿರುವುದಿಲ್ಲ.

4) ಕಾರ್ಯ ಪರಿಶೀಲನೆ ವೇಳೆ ಕಟ್ಟಡಕ್ಕಾಗಿ ಸಾಮಗ್ರಿ ತರಿಸಲಾಗಿದ್ದು, ಚೆಕ್ ಮೂಲಕ ನೀಡಲಾದ ಮೊತ್ತವನ್ನು ಸದರಿ ವೆಚ್ಚಗಳಿಗೆ ಭರಿಸಿರುವುದಾಗಿ ತಿಳಿಸಿರುತ್ತಾರೆ.

5) ಅಭಿಯಂತರರು ಕಟ್ಟಡದ ಗುಣಮಟ್ಟ ತೃಪ್ತಿಕರವಾಗಿದೆ ಎಂದು ವರದಿ ನೀಡಿದ್ದರೂ ಸಹ ತಪ್ಪಿತಸ್ಥನೆಂದು ಪರಿಗಣಿಸಿರುವುದು ನ್ಯಾಯಸಮ್ಮತವಾಗಿಲ್ಲವೆಂದು ತಿಳಿಸಿರುತ್ತಾರೆ.

6) ಸದರಿ ಕಾಮಗಾರಿ ಕುರಿತು ಒಟ್ಟು ರೂ.68,196/- ಮೊತ್ತಕ್ಕೆ ಲೆಕ್ಕಪತ್ರ ಕೊಟ್ಟಿದ್ದು, ಶಾಲಾ ವತಿಯಿಂದ ಮಂಜೂರಾದ ರೂ.60,000/- ಗಳು ಮಾತ್ರ ಬಿಡುಗಡೆ ಆಗಿರುತ್ತದೆ.

7) ಎಸ್.ಡಿ.ಎಂ.ಸಿ. ಸದಸ್ಯನಾಗಿ ಶಾಲಾ ಅಭಿವೃದ್ಧಿ ಕೆಲಸ ಮಾಡಿದ್ದು, ಕಮಿಟಿ ಕೋರಿಕೆಯಂತೆ ಸೂಪರ್‌ವಿಜನ್ ಮಾಡಿದ್ದು, ಮಾನ್ಯ ಉಪಲೋಕಾಯುಕ್ತ ವರದಿಯಂತೆ ಯಾವುದೇ ಕ್ರಮ ಕೈಗೊಳ್ಳದಿರಲು ವಿನಂತಿ ಮಾಡಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಮಾನ್ಯ ಉಪಲೋಕಾಯುಕ್ತ ವರದಿಯನ್ವಯ ಸದರಿಯವರ ವಿರುದ್ಧ ಆರೋಪಗಳ ಸಾಬೀತಾಗಿರುವ ಹಿನ್ನೆಲೆಯಲ್ಲಿ, ಉಪಲೋಕಾಯುಕ್ತ ವರದಿಯಲ್ಲಿನ ಶಿಫಾರಸ್ಸಿನಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43ಎ ರನ್ವಯ ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ದುರ್ನಡತೆ ಎಸಗಿರುವ ಆರೋಪದ ಮೇಲೆ ಸದರಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.
ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 918 ಗ್ರಾಪಂಅ 2017 ಬೆಂಗಳೂರು, ದಿನಾಂಕ: 15.09.2017**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸುಳಗಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ ಶಾಲೆಯ ಅಕ್ಷರ ದಾಸೋಹ ಗೋಡೌನ್ ಕಾಮಗಾರಿಯನ್ನು ಟೆಂಡರ್ ಮೂಲಕ ನಿರ್ವಹಿಸದೆ, ಸ್ವತಃ ನಿರ್ವಹಣ ದುರುಪಯೋಗಪಡಿಸಿಕೊಂಡು ಅವ್ಯವಹಾರ ಎಸಗಿದ್ದು, ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆಯ ಅಥವಾ ತಲೆ ತಗ್ಗಿಸುವಂಥ ನಡತೆಯ ತಪ್ಪಿತಸ್ಥನಾಗಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ ರನ್ವಯ ಕ್ರಮ ಜರುಗಿಸಿ, ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಬೆಳಗಾವಿ ತಾಲ್ಲೂಕಿನ ಸುಳಗಾ ಗ್ರಾಮ ಪಂಚಾಯತಿಯ ಸದಸ್ಯ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

*(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್),*
*ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರಿಂದ ಅನುಮೋದಿತ)*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ವಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1) ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
3) ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ತಾಲ್ಲೂಕು ಪಂಚಾಯತಿ, ಬೆಳಗಾವಿ. (ಸದರಿಯವರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
4) ಶ್ರೀ ಯಲ್ಲಪ್ಪ ಸಿದ್ಧಪ್ಪ ಕಲಕಾಂಬಕರ, ಸುಳಗಾ ಗ್ರಾಮ ಪಂಚಾಯತಿ ಸದಸ್ಯರು, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸುಳಗಾ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ.
6) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7) ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ನಿರ್ದೇಶಕರು(ಪಂ.ರಾಜ್–1), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.